ಹಚ್ಚಿಕೊಂಡಿದ್ದೇನೆ. ಓದು ಮತ್ತು ಬದುಕು ಕಲಿಸಿದ ಆರ್ಕಿಟೆಕ್ಚರನ್ನು, ಇಂದಿಗೂ, ಮನಸ್ಸು ತುಂಬುವ ಹುಚ್ಚೆನ್ನುವ ಹಾಗೆ ಇಟ್ಟುಕೊಂಡಿರುವುದರಿಂದ, ಅದರ ಬಗ್ಗೆ ಸಿಕ್ಕಾಪಟ್ಟೆ ತಿಳಿದುಕೊಂಡಿದ್ದೇನೆ. ಅದುವೇ ಧರ್ಮವೆಂಬಂತೆ ಮನಸಾ ಪಾಲಿಸುತ್ತೇನೆ. ಆರ್ಕಿಟೆಕ್ಚರು ಕುರಿತು ಸಾಕಷ್ಟು ಪುಸ್ತಕಗಳನ್ನು ಕಲೆಹಾಕಿಕೊಂಡಿದ್ದೇನೆ. ದಿನವೂ ಒಂದಲ್ಲೊಂದು ಓದುತ್ತೇನೆ. ಮನನಿಸುತ್ತೇನೆ. ಇಂಟರ್ನೆಟ್ಟಿದೆಯಾಗಿ ಅದು ಇದು ಜಾಲಿಸುತ್ತೇನೆ. ವಿಡಿಯೊ ಡೌನ್ಲೋಡುಗೈದು ಸಿನಿಮಾ ನೋಡುತ್ತೇನೆ. ಫೇಸ್‌ಬುಕ್‌ನಲ್ಲಿ, ಜಗತ್ತಿನೆಲ್ಲೆಡೆಯ ಆರ್ಕಿಟೆಕ್ಟುಗಳ ಅಮೌಖಿಕ ಸಾಂಗತ್ಯವನ್ನು ಹೊಂದಿದ್ದೇನೆ. ರಾತ್ರಿಯೆಂಬ ರಾತ್ರಿಯಿರಲಿ, ಹಗಲು ಕೂಡ ಉದಾಸಗೈದು ಜರುಗುವ ಈ 'ಸೀತಾನದಿ'ಯಲ್ಲಿ ಹೊತ್ತು ಹೊಯ್ದುಕೊಳ್ಳಲು ಇನ್ನೇನು ಮಾಡಿಯೇನೆಂಬ ಅತಾರ್ಕಿಕ ಕಾರಣವೊಂದಿದೆಯಾದರೂ, ಹೀಗೆ ಮನಸೋಇಚ್ಛೆ ಓದೆರೆದುಕೊಳ್ಳುವುದಕ್ಕೆ, ಇದನ್ನೇ ಸಬೂಬೆಂದುಕೊಳ್ಳುವುದು ಸಾಧುವೆ? ಅಥವಾ ಸಾಧ್ಯವೆ?

ಇರಲಿ... ಇಷ್ಟೆಲ್ಲ ಓದುತ್ತಿರುವ ನಡುವೆ, ಮನಸ್ಸು ಮಿಂಚಿಸುತ್ತ ತೋರಿಬರುವ ಸಾಲ್ಮುತ್ತುಗಳನ್ನು ಹೆಕ್ಕಿ, ಕೂಡಲೆ, ಮೊಬೈಲಿನಲ್ಲಿ ಕೀಲಿಸಿ, ಗೆಳೆಯರಿಗೆ ವಾಟ್ಸಾಪು ಮಾಡುತ್ತೇನೆ. ಅವರುಗಳೂ ಅವಕ್ಕೊಂದೆರಡು ಷರೆ ಬರೆದು ವಾಪಸು ಕಳಿಸುತ್ತಾರೆ. ಟಿಪ್ಪಣಿ ಹೇಳುತ್ತಾರೆ. ನನ್ನನ್ನು ಹೊಳೆಯಿಸಿದ ಮಿಂಚು, ಓರಗೆಯವರನ್ನೂ ಬೆಳಗಿ, ಕೋಲ್ಮಿಂಚು–ಸಾಲ್ಮಿಂಚುಗಳ ಸರಣಿಯೊಂದು, ಅರಿವಿಲ್ಲದೆ, ನಮ್ಮ ನಡುವೆ ಪ್ರತಿಫಲಿಸಿ ಏರ್ಪಡುತ್ತದೆ. ಪ್ಲೇಟೋ–ಅರಿಸ್ಟಾಟಲರಿಂದ ಸುರುಗೊಂಡು, ವಿಟ್ರುವಿಯಸ್–ಜಾನ್ರಸ್ಕಿನ್ನುಗಳನ್ನೂ ಒಳಗೊಂಡು ಆಧುನಿಕ ಆರ್ಕಿಟೆಕ್ಚರಿನ ಅಧ್ವರ್ಯುಗಳಾದ ಮೀಸ್–ಕಾರ್ಬುಸಿಏರುಗಳೂ ಅಲ್ಲದೆ, ಇವೊತ್ತಿನ ಹದೀದ್–ಗೇಹ್ರಿಗಳವರೆಗೂ ಮಾತು ಸುತ್ತಿ, ಸುತ್ತಿಸಿಕೊಂಡಿರುತ್ತೇವೆ. ನನಗುಂಟಾದ 'ಹೈ'ಯೇ ಗೆಳೆಯರಲ್ಲೂ ಮರುಕಳಿಸಿ, 'ಹೈ'ಯೇ 'ಹೈ'ಯಾದ ಎತ್ತರವೊಂದು ನಮ್ಮೊಳಗೆ ಕಟ್ಟಿಕೊಳ್ಳುತ್ತದೆ! ನಮ್ಮನ್ನುತ್ತರಿಸುತ್ತದೆ; ಮತ್ತು ಎತ್ತರಿಸುತ್ತದೆ!

ಇನ್ನು, ಈ ಚಿರಾಗ್ ನನ್ನ ಎಸ್ಸೆಮ್ಮೆಸು, ವಾಟ್ಸ್‌ಆ್ಯಪುಗಳಿಗೆ ಯಾವೊತ್ತೂ ಪ್ರತಿಕ್ರಿಯಿಸುತ್ತಿರುವನಾಗಿ, ನಡುವೆ ಆಗಾಗ ಮಾತು ಹುಟ್ಟಿಬರುತ್ತದೆ. ನಾನಾದರೂ, ಎಲ್ಲೋ ಏನೋ ಓದಿ ಹೇಳುವಂಥವಕ್ಕೆ, ಇವನು ತನ್ನದೇ ಬುದ್ಧಿಮತ್ತೆಯನ್ನು ವಿನಿಯೋಗಿಸಿ ಸ್ವತಂತ್ರವೂ ಸ್ವಕೀಯವೂ ಆದ ತನ್ನದೇ ಪಲುಕುಗಳನ್ನು ಹೊಸೆಯುತ್ತಾನೆ. ಬೆಸೆಯುತ್ತಾನೆ. ಸಾಲದುದಕ್ಕೆ ಖುದ್ದು ಬರಹಗಾರ ಬೇರೆ; ಕವಿ ಕೂಡ. ಪ್ರತಿಮಾತುಗಳಿಂದ ನನ್ನನ್ನುದ್ದೀಪಿಸುತ್ತಾನೆ. ಉನ್ಮಾದಿಸುತ್ತಾನೆ.

ಈಗ, ಈ ಭಾನುವಾರದೊಂದು ಪುರುಸೊತ್ತಿನಲ್ಲಿ 'ಮ್ಯಾಡಿಸನ್‌ಕೌಂಟಿ' ಸಿನೆಮಾದ ಮಾತು ಬಂದಿದ್ದಾದರೂ ಹೀಗೆಯೆ.

★★★

'ಇನ್ನೊಂದೆರಡೇ ಎರಡು ನಿಮಿಷ, ಚಿರಾಗ್... ನಿನಗೆ ಈ ಕತೆ ಹೇಳಲೇಬೇಕು. ಟೈಮ್ ಇದೆ ಅಲ್ಲವಾ?' ಮಾತು ಸುರುಗೊಂಡು ಅರ್ಧ ತಾಸಿಗೂ ಮೊದಲಾಗಿತ್ತಾದ್ದರಿಂದ, ಔಪಚಾರಿಕವಾಗಿ ಕೇಳಿದೆ. ಎಷ್ಟಾದರೂ ಬೆಂಗಳೂರಿನ ಗಡಿಬಿಡಿಯ ನಡುವೆ ಬಿಡುವಿರುತ್ತದೆಲ್ಲಿ?!

'ಯಾ ಯಾ! ಕ್ಯಾರೀ ಆನ್...' ಅಂತಂದ.

'ಹ್ಞಾಂ... ಇವರಿಬ್ಬರು ದಂಪತಿ ಹೆಚ್ಚೇನೂ ನಗರೀಕರಣವಿರದ ಮ್ಯಾಡಿಸನ್‌ಕೌಂಟಿಯಲ್ಲಿ ಫಾರ್ಮಿಂಗ್ ಮಾಡಿಕೊಂಡಿರುತ್ತಾರೆ. ಹೆಚ್ಚುಕಮ್ಮಿ ಚೆನ್ನಾದ ದಾಂಪತ್ಯ. ಆದರೆ ಹೆಂಡತಿ